ಸಿಸಿ 2792/2023 ಡಿ ಡಬ್ಲೂ:1

ಸಾಕ್ಷಿಯನ್ನು ದಿಃ 2.9.2024 ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದಃ

2 ರಿಂದ 4 ನೇ ಆರೋಪಿಗಳು ನಮ್ಮ ಏರಿಯದವರು ಆಗಿರುವುದರಿಂದ ಪರಿಚಯ. ಚಾಸಾ1 ರವರು ಸಹ ನಮ್ಮ ಏರಿಯದವರು ಆಗಿರುವುದರಿಂದ ಪರಿಚಯ. ಚಾಸಾ1 ರವರು ದೇವಸ್ಥಾನದ ಬಳಿ ಮದ್ಯಾಹ್ನ 3.30 ಗಂಟೆಗೆ ಮೈಕ್ ಅನ್ನು ಬಳಸಬಾರದು ಎಂದು ನಾವು ದೇವಸ್ಥಾನದ ಸ್ವ ಚ್ಚ ಮಾಡುತ್ತಿರುವಾಗ ದೇವಸ್ಥಾನದ ಮುಂದೆ ಬಂದು ಹೇಳಿರುತ್ತಾರೆ. ಚಾಸಾ1 ರವರು ಮೈಕ್ ಬಳಸಬಾರದು ಎಂದು ನನಗೆ ನೇರವಾಗಿ ಹೇಳಿರುವುದಿಲ್ಲ. ಚಾಸಾ1 ರವರು ದೇವಸ್ಥಾನದ ಮುಂದೆ ಇರುವ ಸೌಂಡ್ ಸಿಸ್ಟಂ 2 ಇಂಟೂ 3 ಅಡಿ ಯನ್ನು ಕೈ ಯಿಂದ ತಳ್ಳಿದಾಗ ನಾನು 10 ಅಡಿ ದೂರದಲ್ಲಿರುತ್ತೇನೆ. ಚಾಸಾ1 ರವರು ದೇವಸ್ಥಾನದ ಬಳಿ ನನ್ನನ್ನು ಮತ್ತು 2 ರಿಂದ 4 ನೇ ಆರೋಪಿಗಳನ್ನು ನಿಮ್ಮ ಅಮ್ಮನೇ ಕೇಯ, ತಿಕ್ಕ ಮುಚ್ಚಿಕ್ಕೊಂಡು ಇರು ನಾನು ನಿದ್ರೆ ಮಾಡಬೇಕು ಎಂದು ಬೈದಿರುತ್ತಾನೆ. ನಾನು ಮತ್ತು 2 ರಿಂದ 4 ನೇ ಆರೋಪಿಗಳು ಪೊಲೀಸ್ ಠಾಣೆಗೆ ಹೋಗಿ ಚಾಸಾ1 ರವರ ಮೇಲೆ ದೂರು ಕೊಟ್ಟಿರುತ್ತಾರೆ, ಆದರೆ ಪೊಲೀಸರು ದೂರು ತೆಗೆದುಕೊಂಡಿರುವುದಿಲ್ಲ ಮತ್ತು ಒಂದೇ ಏರಿಯದವರು ಆಗಿರುವುದರಿಂದ ಹೋಗಿ ಎಂದು ತಿಳಿಸಿರುತ್ತಾರೆ. ನಾನು ಪೊಲೀಸ್ ಠಾಣೆಯಲ್ಲಿ ದೂರು ತೆಗೆದುಕೊಂಡಿಲ್ಲ ಎಂದು ಮೇಲಾಧಿಕಾರಿಗಳ ಬಳಿ ಹೋಗಿಲ್ಲ.

4. ನಿಡಿ1 ರ ಸಿಡಿಯಲ್ಲಿ ನಾನು ಇರುತ್ತೇನೆ. ನಿಡಿ1 ರ ಸಿಡಿಯಲ್ಲಿರುವ ಘಟನಾ ಸ್ಥಳ ಮತ್ತು ಸೌಂಡ್ ಸಿಸ್ಟಂ ಇಟ್ಟಿರುವ ಸ್ಥಳ ನಡುವೆ 5 ಅಡಿ ಅಂತರ ಇರುತ್ತದೆ. ನಿಡಿ1 ರ ಸಿಡಿಯ ಪ್ರಕಾರ ಚಾಸಾ1 ರವರಿಗೂ ಮತ್ತು 3 ನೇ ಆರೋಪಿಗೂ ಗಲಾಟೆಯಾಗಿ ಇಬ್ಬರೂ ಹೊಡೆದಾಗಿ ಕೊಂಡಿರುತ್ತಾರೆಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಚಾಸಾ1 ರವರು ಹೊಡೆದಿರುತ್ತಾರೆ. ನಾನು ಇತರ ಆರೋಪಿಗಳು ಪೊಲೀಸ್ ಠಾಣೆಗೆ ಕರೆ ಮಾಡಿರುವುದಿಲ್ಲ. ದೇವಸ್ಥಾನದಲ್ಲಿ ಮೈಕ್ ಸೆಟ್ ಅಳವಡಿಸಿರುವ ಬಗ್ಗೆ ಪೊಲೀಸರ ಅನುಮತಿ ಪಡೆದಿರುತ್ತೇವೆ ಆದರೆ ದಾಖಲೆ ನ್ಯಾಯಾಲಯಕ್ಕೆ ಕೊಟ್ಟಿಲ್ಲ. 2 ರಿಂದ 4 ನೇ ಆರೋಪಿಗಳು ದೇವಸ್ಥಾನದ ಟ್ರಸ್ಟಿ ಗಳಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಮತ್ತು 2 ರಿಂದ 4 ನೇ ಆರೋಪಿಗಳು ಚಾಸಾ1 ರವರ ವಿರುದ್ಧ ಬೇರೆ ಪ್ರಕರಣ ದಾಖಲಿಸಿಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).

ಓದಿ ಹೇಳಿ ಕೇಳಿ ಸರಿ ಇದೆ

(ವಿನೋದ್ ಕುಮಾರ್ ಎಂ )

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಅಪರ ಜೆ.ಎಂ.ಎಫ್.ಸಿ, ಕೆಜಿಎಫ್.